**ಓ ಎಸ್ ನಂ 541/2022**

**ಪಿ. ಡಬ್ಲ್ಯೂ ಃ 1**

**ದಿಃ 16.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎಂ ಸಿ ಜೆ ವಕೀಲರಿಂದ ಃ**

ದಾವಾ ಸ್ವತ್ತುಗಳು ನಮ್ಮ ತಾತ, ಅಜ್ಜಿ ಮತ್ತು ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ ಎಂದು ತೋರಿಸಲು ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವ ಯಾವ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದು ಕೇಳಿದರೆ ಸಾಕ್ಷಿ ನಾನು ಎಲ್ಲ ದಾಖಲಾತಿಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳಲ್ಲಿ ನನ್ನ ತಾತ ಮತ್ತು ನನ್ನ ತಂದೆಯ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-4 ವಂಶವೃಕ್ಷವನ್ನು ತಾವರೇಕೆರೆಯ ತಹಶೀಲ್ದಾರ್ ಕಚೇರಿಯಲ್ಲಿ ತೆಗೆದುಕೊಂಡಿರುತ್ತೇನೆ. ನಿಪಿ 4 ನ್ನು ಪಡೆಯಲು ನಾನು ಅರ್ಜಿಯನ್ನು ತಹಶೀಲ್ದಾರ್ ಕಚೇರಿಯಲ್ಲಿ ನೀಡಿದ್ದೆ. ಯಾವ ವರ್ಷ ಅರ್ಜಿಯನ್ನು ನಾನು ನೀಡಿದ್ದೆ ಎಂದು ಕೇಳಿದರೆ ಸಾಕ್ಷಿ ನಾನು ಓದಿರುವುದಿಲ್ಲ, ನನಗೆ ದಿನಾಂಕ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸದರಿ ಅರ್ಜಿಯನ್ನು ನನ್ನ ತಾಯಿ ತಾಲ್ಲೂಕು ಕಚೇರಿಯಲ್ಲಿ ಕೊಡಿಸಿರುತ್ತಾರೆ. ನಾನಾಗಲಿ , ನನ್ನ ಅಕ್ಕ ತಂಗಿಯರರಾಗಲಿ ಸದರಿ ಅರ್ಜಿಯನ್ನು ನೀಡಿರುವುದಿಲ್ಲ ಎಂದರೆ ಸರಿ. ನಿ ಪಿ 4 ನ್ನು ನನ್ನ ತಮ್ಮ ಮುನಿರಾಜು ರವರು ಅರ್ಜಿ ಕೊಟ್ಟು ಪಡೆದಿರುವ ದಾಖಲಾತಿ ಆಗಿರುತ್ತದೆ ಎಂದರೆ ಸರಿಯಲ್ಲ.
ನಿ ಪಿ 4 ನ್ನು ನನ್ನ ತಮ್ಮ ಕೊಟ್ಟಿರುವ ದಾಖಲಾತಿ ಎಂದರೆ ಸರಿಯಲ್ಲ. ನಿ ಪಿ 4 ನ್ನು ನನ್ನ ತಮ್ಮ ಸಹಿ ಮಾಡಿ ಪಡೆದಿರುವ ದಾಖಲಾತಿ ಎಂದರೆ ಸರಿಯಲ್ಲ. ನಿ ಪಿ 4 ರಲ್ಲಿ ತೋರಿಸಿರುವ ಎಲ್ಲ ವಿಷಯಗಳು ಸರಿಯಾಗಿರುತ್ತವೆ.

ನಾನು ಓ ಎಸ್ 32/2011 ದಾವೆಯಲ್ಲಿ 5 ಐಟಂಗಳ ಮೇಲೆ ದಾವೆಯನ್ನು ನಾನು ಹೂಡಿರುತ್ತೇನೆ. ಸದರಿ ದಾವೆಯಲ್ಲಿ ಐಟಂ ನಂಬರ್ 5 ರ ಮೇಲೆ ದಾವೆ ನಡೆಸಲು ನನಗೆ ಇಚ್ಛೆ ಇರುವುದಿಲ್ಲವೆಂದು ಹಿಂಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಸ.ನಂ. 51/5 ರ ಮೇಲೆ ದಾವೆಯನ್ನು ಹಿಂಪಡೆದಿರುವ ವಿಚಾರ ಗೊತ್ತಿದೆಯೋ ಇಲ್ಲವೋ ಎಂದರೆ ನನಗೆ ಗೊತ್ತಿಲ್ಲ, ಎಲ್ಲ ಆಸ್ತಿಗಳು ಒಟ್ಟು ಕುಟುಂಬದಲ್ಲಿರುತ್ತವೆ ಎಂದು ಸಾಕ್ಷಿ ನುಡಿಯುತ್ತಾರೆ. ಐಟಂ ನಂಬರ್ 5 ನನ್ನ

ತಾತನ ಸ್ವತ್ತಾಗಿದ್ದು, ಅದು ನನ್ನ ತಂದೆಯವರಿಗೆ ತಾತನಿಂದ ಬಂದಿರುತ್ತದೆ. ನನ್ನ ತಾತನಿಂದ ನನ್ನ ತಂದೆಗೆ ಬಂದಿರುವಂತಹ ಯಾವುದೇ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-6 ರಲ್ಲಿ ತೋರಿಸಲಾಗಿರುವ ಸ್ವತ್ತನ್ನು ವೆಂಕಟಾಚಲಯ್ಯರವರು ಅವರ ಸ್ವಂತ ದುಡಿಮೆಯಿಂದ ಸಂಪಾದನೆ ಮಾಡಿದ ಹಣದಿಂದ ಖರೀದಿ ಮಾಡಿರುವ ಸ್ವತ್ತಾಗಿರುತ್ತದೆ ಎಂದರೆ ಸಾಕ್ಷಿ ಸದರಿ ಆಸ್ತಿಯನ್ನು ಒಟ್ಟು ಕುಟುಂಬದ ಪರವಾಗಿ ನನ್ನ ಅಣ್ಣನ ಹೆಸರಿನಲ್ಲಿ ಇಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿ ಪಿ 6 ಖರೀದಿ ಮಾಡುವ ಸಮಯಕ್ಕೆ ನನ್ನ ತಂದೆಯವರು ಬದುಕಿರಲಿಲ್ಲ ಎಂದರೆ ಸರಿ. 1972 ರಲ್ಲಿ ನನಗೆ 10 ಅಥವಾ 12 ವರ್ಷ ವಯಸ್ಸಾಗಿತ್ತು. ಅದೇ ರೀತಿ 1972 ರಲ್ಲಿ ಪ್ರತಿವಾದಿ 3 ರವರಿಗೆ 7 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ದಾವಾ ಐಟಂ ನಂಬರ್ 5 ಒಟ್ಟು ಕುಟುಂಬದ ಆಸ್ತಿಯಾಗಿರುವುದಿಲ್ಲ, ಅದು ಪ್ರತಿವಾದಿ 1 ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

1972 ರಲ್ಲಿ ನಾವು ಕೂಲಿ ಮಾಡಲು ಹೋಗುತ್ತಿರಲಿಲ್ಲ, ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಐಟಂ ನಂಬರ್ 5 ರ ಸ್ವತ್ತು ಪ್ರತಿವಾದಿ 1 ರವರು ಕ್ರಯಕ್ಕೆ ಪಡೆದ ನಂತರ ಕಂದಾಯ ದಾಖಲಾತಿಗಳು ಅವರ ಹೆಸರಿನಲ್ಲಿ ಬರುತ್ತಿತ್ತು ಎಂದರೆ ಸರಿ. ಎಲ್ಲ ಸ್ವತ್ತುಗಳು ಅವರ ಹೆಸರಿನಲ್ಲಿ ಬರುತ್ತಿದ್ದವು ಎಂದು ಸಾಕ್ಷಿ ನುಡಿಯುತ್ತಾರೆ. ನಿ ಪಿ 8 ರ ಕ್ರಯಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಮಾಹಿತಿ ನನಗೆ 1992 ರಲ್ಲೇ ಇತ್ತು. 1992 ರಿಂದ ಇಲ್ಲಿಯವರೆವಿಗೂ ಸದರಿ ಕ್ರಯಪತ್ರವನ್ನು ನಾನು ಏಕೆ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸದರಿ ಜಮೀನನ್ನು ಮಾರಿದ ನಂತರ 30 ಗುಂಟೆ ಜಮೀನನ್ನು ನನ್ನ ಅಣ್ಣ ಖರೀದಿ ಮಾಡಿದ್ದು, ಅದು ನಮ್ಮ ಕುಟುಂಬದಲ್ಲೇ ಇದೆ ಎಂದು ನಾನು ಸುಮ್ಮನಿದ್ದೆ ಎಂದು ನುಡಿಯುತ್ತಾರೆ.

ನನ್ನ ಅಣ್ಣನವರು 1992 ರಲ್ಲಿ ಸದರಿ ಜಮೀನನ್ನು ಖರೀದಿ ಮಾಡಿರುತ್ತಾರೆ. ಸದರಿ ಖರೀದಿ ಮಾಡಿರುವ ವಿಚಾರ 1992 ರಿಂದ ನನಗೆ ಗೊತ್ತಿರುತ್ತದೆ. ಸದರಿ 32 ಗುಂಟೆ ಜಮೀನನ್ನು ನನ್ನ ತಾತನ ಕಡೆಯಿಂದ ಖರೀದಿ ಮಾಡಲಾಗಿರುತ್ತದೆ. ಸದರಿ 32 ಗುಂಟೆ ಜಮೀನನ್ನು ನಿಪಿ 7 ರಂತೆ ಪ್ರತಿವಾದಿ 1 ರವರು ನರಸಮ್ಮ, ರೇವಣ್ಣ , ವೆಂಕಟೇಶ್, ಹನುಮಂತರಾಯ ಮತ್ತು ನಾಗರಾಜು ರವರ ಕಡೆಯಿಂದ ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ**

ಮುಂದೂಡಲಾಯಿತು.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.